ಗೊತ್ತಿರುವ ವಿಚಾರ. ಆದ ಕಾರಣ ಅವರಿಗೂ ಕೂಡ ಈ ಪ್ರಮಾಣವನ್ನು ಹೆಚ್ಚುಮಾಡಬೇಕೆಂದು ಕೇಳಿ, ಗ್ರಾಮೀಣಪ್ರದೇಶದಲ್ಲಿ ವಿದ್ಯುತ್ ಬಹಳ ಅಭಾವ ಇರುವುದರಿಂದ ಆ ಕಾರ್ಡ್‌ದಾರರಿಗೆ ೩ ಲೀಟರ್‌ಗಿಂತ ಹೆಚ್ಚಿಗೆ ಕೊಡಬೇಕೆಂದು ನಾನು ಮಂತ್ರಿಗಳಿಗೆ ವಿನಂತಿಸಿ ಕೊಳ್ಳುತ್ತೇನೆ ಹಾಗೂ ರಾಜ್ಯಕ್ಕೆ ಬರುತ್ತಿರುವ ಶೇಕಡಕ್ಕಿಂತಹ ಸೀಮೆ ಎಣ್ಣೆ ಪ್ರಮಾಣದಲ್ಲಿ ಏನು ಕೊರತೆ ೨೪೦೦ ಲೀಟರ್‌ಗಿಂತ ಹೆಚ್ಚು ಇದೆ ಇವನ್ನು ತುಂಬಲು ಸರಕಾರ ಏನು ಕ್ರಮ ತೆಗೆದುಕೊಳ್ಳುತ್ತದೆಂದು ಕೇಳಬಯಸುತ್ತೇನೆ.

ಶ್ರೀಮತಿ ಮನೋರಮಾ ಪದ್ಮರಾಜ್.—ಬಾಕಿ ಉಳಿದಿರುವಕ್ಕಿಂತಹ ಕಾರ್ಡುಗಳ ವಿತರಣೆಯನ್ನು ಒಂದು ತಿಂಗಳೊಳಗೆ ಮಾಡುತ್ತೇವೆ. ಗ್ರಾಮಾಂತರ ಪ್ರದೇಶದಲ್ಲಿ ಗ್ಯಾಸ್ ಇರುವವರಿಗೆ ೨ ಲೀಟರ್ ಸೀಮೆಎಣ್ಣೆ ಕೊಡುತ್ತಿದ್ದೀರಿ. ಇದು ಸಾಲುವುದಿಲ್ಲ ಮೂರು ಲೀಟರ್ ಕೊಡಿ ಎಂದು ಹೇಳುತ್ತಿದ್ದಾರೆ. ಕೇಂದ್ರ ಸರಕಾರದ ಉದಾರ ನೀತಿಯಿಂದಾಗಿ ಈಗಾಗಲೇ ಕೆಲವು ಖಾಸಗಿ ವ್ಯಾಪಾರಿಗಳು ಸೀಮೆಎಣ್ಣೆಯನ್ನು ಆಮದು ಮಾಡಿಕೊಂಡು ಈ ಹೋಟೆಲ್ ಮತ್ತು ಬೇರೆ ಉದ್ಯಮದವರಿಗೆ ಅದನ್ನು ಸರಬರಾಜು ಮಾಡುವುದರಿಂದ ನಮಗೆ ಅದಷ್ಟೂ ಸೀಮೆ ಎಣ್ಣೆ ಉಳಿಯುವ ಲಕ್ಷಣಗಳು ಉಂಟು. ಬೋಗಸ್ ಕಾರ್ಡ್‌ಗಳನ್ನು ಗುರುತಿಸಿದ್ದರಿಂದ ೧,೧೪,೦೦೦ ಕಾರ್ಡನ್ನು ಮುಟ್ಟುಗೋಲು ಹಾಕಿದ್ದೇವೆ. ಇದರಿಂದಾಗಿ ೩೦೦ ಕಿಲೋ ಲೀಟರ್ ಏನು ಸೀಮೆ ಎಣ್ಣೆ ಉಳಿಯುತ್ತದೆ, ಅದನ್ನು ಗ್ರಾಮಾಂತರ ಪ್ರದೇಶಕ್ಕೆ ಕಳಿಸಿಕೊಟ್ಟು ಅವರ ಕಷ್ಟವನ್ನು ನೀಗಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ. ಎಸ್. ಆತ್ಮಾನಂದ.—ಕೇಂದ್ರ ಸರಕಾರದಿಂದ ಬಹಳ ಕಡಿಮೆ ಬರುತ್ತಿದೆ, ಸಾಕಾದಷ್ಟು ಸೀಮೆ ಎಣ್ಣೆ ಬರುತ್ತಿಲ್ಲ. ಇದನ್ನು ಹೆಚ್ಚಿಸಲಿಕ್ಕೆ ಸರಕಾರ ಏನು ಕ್ರಮ ತೆಗೆದುಕೊಂಡಿದೆ.

ಶ್ರೀಮತಿ ಮನೋರಮಾ ಪದ್ಮರಾಜ್.—ಇದರ ಬಗ್ಗೆ ನಮ್ಮ ರಾಜ್ಯದ ಲೋಕಸಭಾ ಸದಸ್ಯರುಗಳಿಗೆ ತಾವು ಆಲ್ಲಿ ಪ್ರಯತ್ನ ಮಾಡಿ ಎಂದು ಮನವಿ ಮಾಡಿದ್ದೇವೆ. ನಾವು ಸದಾಕಾಲ ದೆಹಲಿಗೆ ಹೋದಾಗ ನಮ್ಮ ಅಧಿಕಾರಿಗಳು ಆಲ್ಲಿಗೆ ಹೋದಾಗ ಕೇಂದ್ರದ ಮಾನ್ಯ ಮಂತ್ರಿಗಳನ್ನು ಸಹ ಕೇಳುತ್ತಿದ್ದೇವೆ. ಇದು ಪರರಾಷ್ಟ್ರವನ್ನು ಅವಲಂಬಿಸಿಕೊಂಡಿರುವುದರಿಂದ ಇದರ ಬಗ್ಗೆ ಹೆಚ್ಚು ಹೇಳಲು ಹೋಗುವುದಿಲ್ಲ, ಅವರಿಗೆ ಎಷ್ಟು ಸಾಧ್ಯವೋ ಅಷ್ಟು ಕೊಡುತ್ತಿದ್ದಾರೆ. ಕಳೆದ ೩ ತಿಂಗಳಿಂದ ೮೦೦ ಕಿಲೋ ಲೀಟರ್ ಅನ್ನು ಅವರು ಹೆಚ್ಚು ಮಾಡಿದ್ದಾರೆ.

ಮತದಾರರಿಗೆ ಗುರುತು ಚೀಟಿ ನೀಡಿಕೆ ಕುರಿತು

೨೬೩ (೬೨೫) ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಚುನಾವಣಾ ಆಯೋಗದಿಂದ ಗುರುತಿನ ಚೀಟಿಯ ಬಗ್ಗೆ ಪ್ರಸ್ತಾಪಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಮುಂಬರುವ ವಿಧಾನಸಭಾ ಚುನಾವಣೆಯೊಳಗೆ ಮತದಾರರಿಗೆ ಗುರುತಿನ ಚೀಟಿಯ ಸೌಲಭ್ಯವನ್ನು ಕಲ್ಪಿಸಲಾಗುತ್ತಿದೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) ಇವರ ಪರವಾಗಿ ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—

ಅ) ಹೌದು.

ಆ) ನಮ್ಮ ರಾಜ್ಯದ ವಿಧಾನಸಭಾ ಸಾರ್ವತ್ರಿಕ ಚುನಾವಣೆ ಈ ವರ್ಷದಲ್ಲಿ ನಡೆಸುವ ಸಂಭವ ವಿರುವುದರಿಂದ ಮತದಾರರಿಗೆ ಗುರುತಿನ ಚೀಟಿಯ ಕಡ್ಡಾಯವಿಲ್ಲ. ಆದಾಗ್ಯೂ ಈ ವಿಷಯದಲ್ಲಿ ಎಲ್ಲಾ ಪೂರ್ವಸಿದ್ಧತೆಗಳನ್ನು ಮಾಡಲಾಗುತ್ತಿದೆ.

ಶ್ರೀ ಕೆ. ಎಸ್. ಈಶ್ವರಪ್ಪ.—ಮಾನ್ಯ ಅಧ್ಯಕ್ಷರೆ, ಚುನಾವಣಾ ಆಯೋಗದಿಂದ ಗುರುತಿನ ಚೀಟಿ ಬಗ್ಗೆ ಪ್ರಸ್ತಾಪಿಸಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ "ಹೌದು" ಎಂದು ಹೇಳಿದ್ದಾರೆ. ಅದೇ ರೀತಿ ಮುಂಬರುವ ವಿಧಾನಸಭಾ ಚುನಾವಣೆಯೊಳಗೆ ಮತದಾರರಿಗೆ ಗುರುತಿನ ಚೀಟಿಯ ಸೌಲಭ್ಯವನ್ನು ಕಲ್ಪಿಸಲಾಗುತ್ತಿದೆಯೇ ಎನ್ನುವುದಕ್ಕೆ ನಮ್ಮ ರಾಜ್ಯದಲ್ಲಿ ವಿಧಾನಸಭಾ ಸಾರ್ವತ್ರಿಕ ಚುನಾವಣೆ ಈ ವರ್ಷದಲ್ಲಿ ನಡೆಸುವ ಸಂಭವವಿರುವುದರಿಂದ ಮತದಾರರಿಗೆ ಗುರುತಿನ

ಚೀಟಿಯ ಕಡ್ಡಾಯವಿಲ್ಲ. ಆದಾಗ್ಯೂ ಈ ವಿಷಯದಲ್ಲಿ ಎಲ್ಲಾ ಪೂರ್ವ ಸಿದ್ಧತೆಗಳನ್ನು ಮಾಡಲಾಗಿದೆ ಎಂದು ಹೇಳಿದ್ದಾರೆ. ನಾನು ಸರಕಾರವನ್ನು ಕೇಳುವುದಿಷ್ಟೆ, ನಮ್ಮ ರಾಜ್ಯದಲ್ಲಿ ಇದೇ ವರ್ಷದಲ್ಲಿ ಚುನಾವಣೆ ನಡೆಯುತ್ತಿದ್ದು ಈ ಗುರುತಿನ ಚೀಟಿಯ ಕಡ್ಡಾಯ ಮುಂದಿನ ವರ್ಷದಲ್ಲಿ ಇದ್ದರೂ ಕೂಡ ಇದೇ ವರ್ಷದಲ್ಲಿ ಚುನಾವಣೆ ಏನು ಬರುತ್ತದೆ ಅನ್ನುವಂತಹ ಒಂದೇ ವಿಷಯವನ್ನು ಮುಂದಿಟ್ಟು ಕೊಂಡು ಈ ಗುರುತಿನ ಚೀಟಿ ಕೊಡುವಂತಹ ಕೆಲಸವನ್ನು ಮುಂದೆ ಹಾಕುವಂತಹ ಪದ್ಧತಿ ಒಳ್ಳೆಯ ದಲ್ಲವೆಂದು ನನಗನ್ನಿಸುತ್ತದೆ. ಇದರ ಕಡ್ಡಾಯ ಇಲ್ಲದಿರಬಹುದು, ಆದರೆ ಉದ್ದೇಶ ತುಂಬಾ ಒಳ್ಳೆಯದು. ಮುಂದಿನ ಜನವರಿ ೧ನೇ ತಾರೀಖಿನಿಂದ ಚುನಾವಣಾ ಆಯೋಗ ಗುರುತಿನ ಚೀಟಿ ಕಡ್ಡಾಯವೆಂದು ಹೇಳಿದರೂ ಸಹ ನವೆಂಬರ್‌ನಲ್ಲಿಯೇ ನಮ್ಮ ರಾಜ್ಯದಲ್ಲಿ ಚುನಾವಣೆ ನಡೆಯತಕ್ಕಂತಹ ಸಂದರ್ಭ ಇರುವುದರಿಂದ ಈ ಗುರುತಿನ ಚೀಟಿಯ ಮುಖ್ಯ ಉದ್ದೇಶ ಪ್ರಾಮಾಣಿಕವಾಗಿ ಚುನಾವಣೆ ನಡೆಯಬೇಕೆಂಬ ಆಪೇಕ್ಷೆ ಏನು ಇದೆ, ಇದು ಇಡೀ ರಾಷ್ಟ್ರದ ಜನತೆಯ ಆಪೇಕ್ಷೆಯಾಗಿದೆ ಹಾಗೂ ಚುನಾವಣಾ ಆಯೋಗದ ಆಪೇಕ್ಷೆಯೂ ಆಗಿದೆ. ಇಂತಹ ವಿಚಾರದಲ್ಲಿ ನಮ್ಮ ರಾಜ್ಯ ಸರಕಾರ ಕೂಡ ಒಪ್ಪಿಗೆ ಕೊಟ್ಟಿರುವುದು ನಿಜಕ್ಕೂ ಅಭಿನಂದನೀಯ. ಗುರುತಿನ ಚೀಟಿ ಕಡ್ಡಾಯವಿಲ್ಲದಿದ್ದರೂ ಕೂಡ ಇಡೀ ದೇಶಕ್ಕೇ ಮಾದರಿಯಾಗುವ ರೂಪದಲ್ಲಿ ಜನವರಿ ೧ನೇ ತಾರೀಖಿನಿಂದ ಇದು ಬೇಕು ಎಂದು ಅವರು ಆಪೇಕ್ಷೆ ಪಟ್ಟಿದ್ದರೂ ಕೂಡ ೧ ತಿಂಗಳ ಮೊದಲೇ ಚುನಾವಣೆಯಾಗುತ್ತಿರುವ ಸಾಧ್ಯತೆಯಲ್ಲಿ ಇಡೀ ದೇಶಕ್ಕೇ ಮಾದರಿಯಾಗುವ ಹಾಗೆ ಗುರುತಿನ ಚೀಟಿಯನ್ನು ಹಂಚುವುದಕ್ಕೆ ನಮ್ಮ ರಾಜ್ಯ ಸರಕಾರ ಪ್ರಯತ್ನ ಮಾಡುತ್ತದೆಯೇ? ಈ ಗುರುತಿನ ಚೀಟಿಗೆ ನಮ್ಮ ರಾಜ್ಯಕ್ಕೆ ಎಷ್ಟು ಹಣ ಬೇಕಾಗುತ್ತದೆ. ಬಾಬಾ ಅಟೊಮಿಕ್ ರಿಸರ್ಚ್ ಸೆಂಟರ್ ಅವರು ಒಂದು ಗುರುತಿನ ಚೀಟಿಗೆ ೨ ರೂಪಾಯಿ ಸಾಕು ಟ್ರಾನ್ಸ್‌ಪೋರ್ಟೆಷನ್ ೩ ರೂಪಾಯಿ ಹೀಗೆ ಒಟ್ಟು ೪ ರೂಪಾಯಿಯಲ್ಲಿ ಮಾಡಿ ಕೊಡುತ್ತೇವೆಂದು ಹೇಳಿದ್ದಾರೆ. ಬಾಬಾ ಅಟಾಮಿಕ್ ರಿಸರ್ಚ್ ಸೆಂಟರ್‌ನವರು ಒಪ್ಪಿಕೊಂಡಿರುವುದರಿಂದ ಹಣದ ಖರ್ಚು ಕೂಡ ಜಾಸ್ತಿ ಬರಲಿಕ್ಕಿಲ್ಲ. ನಮ್ಮ ರಾಜ್ಯ ಸರಕಾರ ಇದಕ್ಕೆ ಎಷ್ಟು ಹಣ ಬೇಕು ಎಂದು ಯೋಜನೆ ತಯಾರು ಮಾಡಿದೆ ಎಂದಾ ತಿಳಿಸಿದರೆ ಮುಂದಿನ ಪ್ರಶ್ನೆ ಕೇಳುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ.—ಇದರ ಬಗ್ಗೆ ಕೇಂದ್ರದ ಗೃಹ ಸಚಿವಾಲಯದ ಅಧ್ಯಕ್ಷತೆಯಲ್ಲಿ ಎಲ್ಲಾ ಮುಖ್ಯ ಮಂತ್ರಿಗಳ ಸಭೆಯನ್ನು ಕರೆದು ಚರ್ಚೆ ಮಾಡಿದ್ದಾರೆ. ಅದರಲ್ಲಿ ಇದಕ್ಕೆ ವೆಚ್ಚ ಎಷ್ಟು ಬರಬಹುದು ಎಂದು ಅಂದಾಜನ್ನು ತಯಾರು ಮಾಡಿದ್ದಾರೆ. ಮತ್ತು ಈ ಗುರುತಿನ ಚೀಟಿ ಒಬ್ಬೊಬ್ಬರದು ಎರಡೆರಡು ಇರಬೇಕು, (ಇನ್ ಡೂಪ್ಲಿಕೇಟ್) ಎಂದು ಸೂಚನೆಯಲ್ಲಿ ಕೂಡ ಬಂದಿದೆ. ಇದೆಲ್ಲ ಜಾರಿಗೆ ತರಲು ಕರ್ನಾಟಕದಲ್ಲಿ ಸ್ಥೂಲವಾದ ಅಂದಾಜು ೬೦-೭೦ ಕೋಟಿ ರೂಪಾಯಿಗಳು ಬೇಕಾಗುತ್ತದೆ. ನಾವು ಕೇಂದ್ರ ಸರ್ಕಾರದವರನ್ನು ಏನು ಕೇಳಿದ್ದೇವೆ ಎಂದರೆ ನಮಗೆ, ನೂರಕ್ಕೆ ಎಂಭತ್ತರಷ್ಟು ಭಾಗವನ್ನು ಇದಕ್ಕೆ ಖರ್ಚಾಗತಕ್ಕಂಥ ಹಣದಲ್ಲಿ ಒದಗಿಸಿದರೆ ಈ ಕೆಲಸಕಾರ್ಯಗಳನ್ನು ಮಾಡಬಹುದು ಎಂದು ನಾವು ಹೇಳಿದ್ದೇವೆ. ಅದೇ ರೀತಿಯಲ್ಲಿ ಸಾಮಾನ್ಯವಾಗಿ ಭಾರತದೇಶದ ಎಲ್ಲಾ ರಾಜ್ಯಗಳೂ ಕೇಳಿವೆ. ಕೆಲವು ರಾಜ್ಯಗಳವರು ಪೂರ್ತಿ ಹಣ ಕೊಡಿ ಎಂದು ಕೇಳಿದ್ದಾರೆ. ಒಟ್ಟು ಮೂರು ಸಾವಿರ ಜಿಲ್ಲರೆ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಈ ಕಷ್ಟವನ್ನು ಎಲ್ಲರೂ ಎಲ್ಲಾ ರಾಜ್ಯಗಳೂ ಮನಗಂಡಿದ್ದಾರೆ, ಇದು ಮೊದಲನೆಯ ವಿಷಯ. ಎರಡನೆಯ ವಿಷಯ ಕಡ್ಡಾಯ ಇಲ್ಲದೇ ಹೋದರೂ ಕೂಡ ಈ ವರ್ಷವೇ ಮಾಡುವುದಕ್ಕಾಗುತ್ತದೆಯೇ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಆ ಯೋಚನೆ ಇಲ್ಲ. ಆದರೂ ಕೂಡ ಈ ಗುರುತಿನ ಚೀಟಿಯನ್ನು ತಯಾರು ಮಾಡಿತಕ್ಕಂಥ ಪ್ರಕ್ರಿಯೆಯನ್ನು ಈಗಾಗಲೇ ರಾಜ್ಯದ ಚುನಾವಣಾ ಆಯೋಗ ಕೈಗೊಂಡಿದೆ. ಕೇಂದ್ರ ಸರ್ಕಾರದೊಡನೆ ಪತ್ರ ವ್ಯವಹಾರವನ್ನು ಕೂಡ ಹಣದ ವಿಚಾರದಲ್ಲಿ ನಡೆಸಿದೆ. ಮತ್ತು ಪ್ರತಿ ಜಿಲ್ಲಾಧಿಕಾರಿಗಳಿಗೂ ಕೂಡ ಈ ವಿಚಾರದಲ್ಲಿ ವಿವರಗಳನ್ನು ಒದಗಿಸುವುದಕ್ಕೆ ಸೂಚಿಸಲಾಗಿದೆ. ಆದರೆ ಈ ವರ್ಷದ ವಿಧಾನಸಭಾ ಚುನಾವಣೆಯಲ್ಲಿ ಈ ಗುರುತಿನ ಚೀಟಿಯನ್ನು ಹಂಚಿ ಅದರ ಮುಖಾಂತರ ಚುನಾವಣೆ ಮಾಡುವ ಸಂಭವ ಬಹಳ ಕಡಿಮೆ. ಏಕೆಂದರೆ ಇದು ಬಹಳ ಕಷ್ಟಸಾಧ್ಯವಾದ ಕೆಲಸ, ಸುಮಾರು ಮೂರು ಕೋಟಿ ಜನಗಳಿಗೆ ನಾವು ಒದಗಿಸಬೇಕಾಗುತ್ತದೆನ್ನುವ ಮಾತನ್ನು ಮಾತ್ರ ತಮಗೆ ಹೇಳುತ್ತೇನೆ.

ಶ್ರೀ ಎಂ. ವಿ. ವೆಂಕಟಪ್ಪ.—ಮಾನ್ಯ ಸಭಾಧ್ಯಕ್ಷರೇ, ಚುನಾವಣಾಧಿಕಾರಿಗಳು ಈಗಾಗಲೇ ಎಲ್ಲಾ ಜಿಲ್ಲಾ ಚುನಾವಣಾಧಿಕಾರಿಗಳಿಗೆ ಕಾಗದ ಬರೆದು ಟೆಂಡರನ್ನು ಕರೆಯಿರಿ ಎಂದು ಹೇಳಿ ಪುನಃ ಒಂದು ಕಾಗದವನ್ನು ಬರೆದು ಅದನ್ನು ವಿತ್‌ಡ್ರಾ ಮಾಡಿಕೊಳ್ಳಿ ಎಂದು ಹೇಳಿದ್ದಾರೆ. ಬಹುಶ: ಈಗೇನಾದರೂ ಅಸೆಂಬ್ಲಿ ಎಲೆಕ್ಷನ್ಸ್ ಮೇ ಜೂನ್‌ನಲ್ಲಿ ನಡೆಯುವ ಛಾನ್ಸಸ್ ಏನಾದರೂ ಉಂಟೆ ಸ್ವಾಮಿ ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ.—ನಮಗೆ ಗೊತ್ತಿಲ್ಲ ಸ್ವಾಮಿ. ಮುಖ್ಯ ಚುನಾವಣಾಧಿಕಾರಿಗಳು ಹೇಳಿದ್ದನ್ನು ಮಾಡುವುದೇ ಕಷ್ಟ ಇದೆ. ಇನ್ನು ಅವರು ಹೇಳದೆ ಇರುವುದನ್ನು ಏತಕ್ಕೆ ಮಾಡೋಣ?

ಶ್ರೀ ಪಾಟಾಳ್ ನಾಗರಾಜ್.—ನಿಮ್ಮ ಸರ್ಕಾರದವರೇ ಮೇ ನಲ್ಲಿ ಚುನಾವಣೆಯನ್ನು ನಡೆಸಬೇಕು ಎಂದು ಕೇಳಿದ್ದಾರಂತೆ. ಅದು ನಿಜವೇ?

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಬೇರೆ ಬೇರೆ ರಾಜ್ಯಗಳಲ್ಲಿ ಮುಂದಿನ ವರ್ಷ ಚುನಾವಣೆಯಾಗುವುದು ಇದೆ. ಅದಕ್ಕೆ ಗುರುತಿನ ಚೀಟಿಯನ್ನು ಕೊಡುವುದಕ್ಕೆ ಚುನಾವಣಾ ಆಯೋಗದ ಆದೇಶದಂತೆ ಕಾರ್ಯಪ್ರವೃತ್ತರಾಗಿದ್ದಾರೆ. ಕೇಂದ್ರ ಸರ್ಕಾರದ ಸಹಾಯವನ್ನು ಕೇಳಿದ್ದಾರೆ. ಅವರು ಎಷ್ಟು ಕೊಡುತ್ತಾರೋ, ಎಷ್ಟು ಬಿಡುತ್ತಾರೋ ಗೊತ್ತಿಲ್ಲ. ಆದರೂ ಆ ದಿಕ್ಕಿನಲ್ಲಿ ಕೆಲವು ರಾಜ್ಯಗಳಲ್ಲಿ ಚುನಾವಣೆಗೆ ಸಿದ್ಧತೆಗೆ ಪ್ರಾರಂಭವಾಗಿದೆ. ಉದಾ; ಗೆ ಬಿಜೆಪಿ ಸರ್ಕಾರ ಇರುವಂಥ ದೆಹಲಿಯಲ್ಲಿ ಈ ಪ್ರಕ್ರಿಯೆ ಈಗಾಗಲೇ ಪ್ರಾರಂಭವಾಗಿದೆ. ಅದೇ ರೀತಿ ಬೇರೆ ಕಡೆಗಳಲ್ಲಿ ಆ ಕೆಲಸ ಪ್ರಾರಂಭ ಮಾಡಿದ್ದಾರೆ. ಮಹಾರಾಷ್ಟ್ರದಲ್ಲೂ ಪ್ರಾರಂಭ ಮಾಡಿದ್ದೇವೆ ಎಂದು ಹೇಳಿದ್ದಾರೆ. ಆದಕ್ಕೆ ನಾನು ಹೇಳುವುದು, ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿ ಹಣವನ್ನು ತರಿಸುವಂಥ ಪ್ರಯತ್ನವನ್ನು ಮಾಡುವಂಥದ್ದು ಆಗಬೇಕು. ಈಗ ೮೦ ಪರ್‌ಸೆಂಟ್ ಕೇಳಿದ್ದೀರಿ, ಇದು ಸರಿ. ಆದರೆ ನೀವು ಪೂರ್ವಸಿದ್ಧತೆಯನ್ನು ಮಾಡಿದ್ದೇವೆ ಎಂದು ಹೇಳಿದ್ದೀರಲ್ಲ, ಏನು ಸಿದ್ಧತೆಯಾಗಿದೆ? ಸಪ್ಲೋಸ್ ಯಾವುದಾದರೂ ಕಾರಣಕ್ಕೆ ಜನವರಿ ಫೆಬ್ರುವರಿಗೆ ಚುನಾವಣೆ ಮುಂದೆ ಹೋಗುವಂಥ ಸಂದರ್ಭ ಬಂದಾಗ ಆಗ ಕಣ್ಣು ಬಾಯಿ ಬಿಡತಕ್ಕಂಥ ಒಂದು ಪರಿಸ್ಥಿತಿ ಇದೆ. ಇವತ್ತು ಚುನಾವಣಾ ಆಯೋಗದ ಕಮಿಷನರ್ ಚುನಾವಣೆಯನ್ನು ನವೆಂಬರ್‌ನಲ್ಲಿ ನಡೆಸುವುದಕ್ಕೆ ಅವಕಾಶ ಕೊಡದೆ ಚುನಾವಣೆಯೇ ಮುಂದೆ ಹೋಗತಕ್ಕಂಥ ಒಂದು ವಿಶೇಷವಾದ ಪರಿಸ್ಥಿತಿ ಬರಬಹುದು. ಆದಕಾರಣ ಮುಂದಾಲೋಚನೆ ಮಾಡಿ ಕೇಂದ್ರದಿಂದ ಸಹಾಯವನ್ನು ಪಡೆದು ಈಗಲೇ ಐಡೆಂಟಿಟಿ ಕಾರ್ಡ್‌ನ್ನು ಕೊಡುವುದಕ್ಕೆ ವಿಶೇಷ ಪ್ರಯತ್ನ ಮಾಡುವುದಕ್ಕೆ ಪ್ರಾಮಾಣಿಕ ಪ್ರಯತ್ನವನ್ನೇನಾದರೂ ಮಾಡುತ್ತೀರಾ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ.—ಮಾನ್ಯ ಅಧ್ಯಕ್ಷರೇ, ಈ ಚುನಾವಣೆಗೆ ಮುಂಚೆ ಈ ಗುರುತಿನ ಚೀಟಿಯನ್ನು ಕೊಡುವ ಸಂಭವ ಬಹಳ ಕಡಿಮೆ. ಅಷ್ಟು ಮಾತ್ರ ಹೇಳುತ್ತೇನೆ.

ಶ್ರೀ ಕೆ. ಎಸ್. ಈಶ್ವರಪ್ಪ.—ಮಾನ್ಯ ಅಧ್ಯಕ್ಷರೇ, ಇಲ್ಲಿ ತುಂಬಾ ಪ್ರಮುಖವಾದ ಅಂಶ ಎಂದರೆ ಎಷ್ಟು ಹಣ ಬೇಕು ಎನ್ನುವ ವಿಚಾರದಲ್ಲಿ ನಮ್ಮ ರಾಜ್ಯ ಸರ್ಕಾರ ಸ್ವಲ್ಪ ತಪ್ಪುದಾರಿಯಲ್ಲಿದೆ ಎಂದು ನನಗನಿಸುತ್ತದೆ.ಅವರ ತಿಳುವಳಿಕೆ ತಪ್ಪಾಗಿದೆಯೋ? ಅಥವಾ ಅವರಿಗೆ ಯಾರು ಗೈಡ್ ಮಾಡುತ್ತಿದ್ದಾರೆ, ಅವರು ತಪ್ಪುದಾರಿಗೆ ತೆಗೆದುಕೊಂಡು ಹೋಗುತ್ತಿದ್ದಾರೊ ಎಂದು ನನಗೆ ಅರ್ಥವಾಗುತ್ತಿಲ್ಲ. ನಾನು ತುಂಬಾ ಸ್ಪೆಸಿಫಿಕ್ ಆಗಿ ಈ ವಿಷಯವನ್ನು ಹೇಳುತ್ತಿದ್ದೇನೆ. ಬಾಬಾ ಆಟಮಿಕ್ ರೀಸರ್ಚ್ ಸೆಂಟರ್ (ಬಿಎಆರ್‌ಸಿ) ನವರು ಸ್ಪಷ್ಟವಾಗಿ ಹೇಳಿದ್ದಾರೆ. ಒಂದು ಕಾರ್ಡಿಗೆ ಎರಡು ರೂಪಾಯಿ ಬೇಕಾಗುತ್ತದೆ. ಹೋಗುವ ಬರುವ ಖರ್ಚಿಗೆ ಎರಡು ರೂಪಾಯಿ ಸೇರಿದರೆ ಒಂದು ಕಾರ್ಡಿಗೆ ಒಟ್ಟು ನಾಲ್ಕು ರೂಪಾಯಿ ಮಾತ್ರ ಸಾಕು ಎಂದು, ನಮ್ಮ ರಾಜ್ಯದಲ್ಲಿ ಮೂರು ಕೋಟಿ ಜನರಿಗೆ ೧೨ ಕೋಟಿ ರೂಪಾಯಿಯಲ್ಲಿ ಇದು ಬಗೆಹರಿಯುತ್ತದೆ. ೧೨ ಕೋಟಿ ರೂಪಾಯಿಯೇ ಅಕಸ್ಮಾತ್ ಬೇಕಾಗಿದ್ದರೆ ಇಷ್ಟನ್ನು ಭರಿಸುವುದಕ್ಕೆ ರಾಜ್ಯ ಸರ್ಕಾರ ತಯಾರಿದೆಯೇ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಸಲಹೆ ಪರಿಶೀಲನೆಗೆ ಯೋಗ್ಯವಾಗಿದೆ. ಅದರ ಬಗ್ಗೆ ಸಂಬಂಧಪಟ್ಟವರ ಜೊತೆ ಪತ್ರವ್ಯವಹಾರ ಮಾಡಿ ತಾವು ಹೇಳಿದಷ್ಟು ಕಡಿಮೆ ಖರ್ಚಿನಲ್ಲಿ ಆಗುವುದಿದ್ದರೆ ಸರ್ಕಾರದವರು ಅದನ್ನು ತೀವ್ರವಾಗಿ ಪರಿಶೀಲನೆ ಮಾಡುತ್ತಾರೆ.

ಶ್ರೀ ಜಿ. ರಾಜುಗೌಡ.—ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆ ಬಿಟ್ಟು ಹೋಗಿದೆ.

ಅಧ್ಯಕ್ಷರು.—ತಮಗೆ ಹೇಳಿಕಳುಹಿಸಿದ್ದೇನೆ. ತಮ್ಮದನ್ನು ಲೋಕೋಪಯೋಗಿ ಇಲಾಖೆಗೆ ವರ್ಗಾವಣೆಯಾಗಿದೆ.

ಶ್ರೀ ಜಿ. ರಾಜುಗೌಡ.—ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಯನ್ನು ಲೋಕೋಪಯೋಗಿ ಇಲಾಖೆಗೆ ವರ್ಗ ಮಾಡಿದರೆ ಬಹುಶ ಅದು 'ಬಿ' ಗ್ರೂಪ್‌ನಲ್ಲಿ ಬರುತ್ತದೆ. ಅಧಿವೇಶನ ಮುಗಿದ ಮೇಲೆ ಅದು ಬರುವುದಿಲ್ಲ. ಮುಂದಿನ ವಾರ ಆಗುತ್ತದೆ. ದಯಮಾಡಿ ಇದನ್ನು ಪೆಂಡಿಂಗ್ ಕ್ವಶ್ಚನ್ ಎಂದು ರಿಗಣಿಸಿ ನಾಳೆ ಅಥವಾ ನಾಡಿದ್ದು ಉತ್ತರ ಕೊಡಿಸಿ ಸ್ವಾಮಿ. ಹೆಲಿಕಾಪ್ಟರ್ ಬಗ್ಗೆ ಅತಿ

ಮುಖ್ಯವಾಗಿರತಕ್ಕಂಥ ಪ್ರಶ್ನೆ ಇದು. ಆದ್ದರಿಂದ ನಾಳೆ ಅಥವಾ ನಾಡಿದ್ದು ಉತ್ತರ ಕೊಡಿಸುವುದಕ್ಕೆ ವ್ಯವಸ್ಥೆ ಮಾಡಿಸಿ.

ಅಧ್ಯಕ್ಷರು.—ಪ್ರಯತ್ನ ಮಾಡುತ್ತೇನೆ.

ಜ್ಯೂವಲರ್ಸ್ ಬೀದಿಯಲ್ಲಿರುವ ಸಾರಾಯಿ ಅಂಗಡಿಗಳನ್ನು ಮುಚ್ಚುವುದು ಹಾಗೂ ಸ್ಥಳಾಂತರಿಸುವುದರ ಬಗ್ಗೆ

೨೭೦ (೮೧೦) ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಜ್ಯೂವಲರ್ಸ್ ಸ್ಟ್ರೀಟ್ ಸಂಪಂಗಿರಾಮನಗರ ಮತ್ತು ಶಿವಾಜಿನಗರ ರಸ್ತೆಯಲ್ಲಿರುವ ಸಾರಾಯಿ ಅಂಗಡಿಗಳನ್ನು ಮುಚ್ಚಿಸುವ, ಸ್ಥಳಾಂತರಗೊಳಿಸುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರು ನೀಡಿದ ಆದೇಶದ ಪ್ರಕಾರ ಈ ನಿಟ್ಟಿನಲ್ಲಿ ಸಾಧಿಸಿದ ಪ್ರಗತಿಯು ಈಗ ಯಾವ ಹಂತದಲ್ಲಿದೆ ?

ಆ) ಮುಂದಿನ ವಿಳಂಬಕ್ಕೆ ಅವಕಾಶವಾಗದಂತೆ ಮೇಲೆ ತಿಳಿಸಿದ ಸಾರಾಯಿ ಅಂಗಡಿಗಳನ್ನು ಮುಚ್ಚಿಸಲು, ಸ್ಥಳಾಂತರಗೊಳಿಸಲು ಸರ್ಕಾರ ದೃಢ ಮನಸ್ಸು ಹೊಂದಿದೆಯೇ ? ಈ ವಿಷಯದಲ್ಲಿ ಕ್ರಮ ಕೈಗೊಳ್ಳಲು ಅಂತಿಮ ಗಡವು ಯಾವುದು ?

ಇ) ಬೆಂಗಳೂರು ನಗರದಲ್ಲಿ ಸಾರಾಯಿಯ ಚಿಲ್ಲರೆ ವ್ಯಾಪಾರವನ್ನು ಸರ್ಕಾರವೇ ವಶಪಡಿಸಿಕೊಂಡಿದೆ ಮತ್ತು ಸಾರಾಯಿ ವ್ಯಾಪಾರಕ್ಕೆ ನೀಡಿದ ಲೈಸೆನ್ಸ್‌ಗಳನ್ನು ರದ್ದುಪಡಿಸಲಾಗಿದೆ, ಹಾಗೂ ಬೆಂಗಳೂರು ನಗರದಲ್ಲಿ ಸಾರಾಯಿಯ ಚಿಲ್ಲರೆ ವ್ಯಾಪಾರವನ್ನು ನವೀಕರಿಸುವುದಿಲ್ಲವೆಂದು ಮಾನ್ಯ ಮುಖ್ಯಮಂತ್ರಿಯವರು ಸದನದಲ್ಲಿ ಹೇಳಿಕೆ ನೀಡಿದ್ದು ಈ ನೀತಿಯ ಘೋಷಣೆಯಲ್ಲಿ ಏನಾದರೂ ಬದಲಾವಣೆ ಇದೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) ಇವರ ಪರವಾಗಿ ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—

ಅ) ೧೯೯೩-೯೪ನೇ ಸಾಲಿಗೆ ಈ ಅಂಗಡಿಗಳಿಗೆ ಸನ್ನದುಗಳನ್ನು ನೀಡಲಾಗಿದೆ. ಈ ಅಂಗಡಿಗಳನ್ನು ಮುಚ್ಚಿಸುವ ಸ್ಥಳಾಂತರಿಸುವ ವಿಷಯವು ಪರಿಶೀಲನೆಯಲ್ಲಿದ್ದು ಮುಂದಿನ ವರ್ಷ ಅಂದರೆ ೧೯೯೪-೯೫ನೇ ಸಾಲಿಗೆ ಸನ್ನದುಗಳನ್ನು ನೀಡುವುದಕ್ಕೆ ಮುಂಚೆ ಇತ್ಯರ್ಥ ಮಾಡಲಾಗುವುದು.

ಆ) ೧೯೯೪-೯೫ನೇ ಸಾಲಿಗೆ ಸನ್ನದುಗಳನ್ನು ನೀಡುವುದಕ್ಕೆ ಮುಂಚೆ ಈ ವಿಷಯದಲ್ಲಿ ಸಂಪೂರ್ಣವಾಗಿ ಪರಿಶೀಲಿಸಲಾಗುವುದು,

ಇ) ೩-೩-೧೯೯೪ ರಿಂದ ೧೬-೩-೧೯೯೪ ರವರೆಗೆ ಬೆಂಗಳೂರಿನಲ್ಲಿ ಸಾರಾಯಿ ವ್ಯಾಪಾರವನ್ನು ಸರ್ಕಾರವೇ ವಹಿಸಿಕೊಂಡಿತ್ತು. ೧೭.೩.೯೪ ರಿಂದ ಖಾಸಗಿ ಸಂಸ್ಥೆಗೆ ಮಧ್ಯಂತರವಾಗಿ ವಹಿಸಿಕೆ ಮಾಡಲಾಗಿದೆ.

ಶ್ರೀ ಎ.ಕೆ. ಅನಂತಕೃಷ್ಣ.—ಮಾನ್ಯ ಅಧ್ಯಕ್ಷರೇ, ನನಗೆ ಮಾನ್ಯ ಮುಖ್ಯಮಂತ್ರಿಗಳು ಕಾಗದವನ್ನು ಬರೆದು ಬಹಳ ಖಚಿತವಾಗಿ ಇದನ್ನು ಮುಚ್ಚುತ್ತೇವೆ, ಮುಚ್ಚುವುದಕ್ಕೆ ಆದೇಶವನ್ನು ಕೊಟ್ಟಿದ್ದೇನೆ. ಸಂಬಂಧಪಟ್ಟ ಅಧಿಕಾರಿಗಳಿಗೆ ಎಂದು ಹೇಳಿದ್ದಾರೆ. ಒಂದಲ್ಲ, ಮೂರು ಕಾಗದಗಳು ಬಂದಿವೆ. ಒಂದೊಂದು ಕಾಗದ ಒಂದೊಂದು ತರಹ ಇದೆ. ಈಗ ೨೬ನೇ ತಾರೀಖಿಗೆ ಬರೆದ ಕಾಗದದಲ್ಲಿ ಬಹಳ ಖಚಿತವಾಗಿ ಹೇಳಿದ್ದಾರೆ. ಇದರಲ್ಲಿ ಏನು ಹೇಳುತ್ತಾರೆ ಎಂದರೆ ಎಕ್ಸ್‌ಪಿನ್ ಮಾಡುತ್ತೇವೆ, ಸೂಕ್ತ ಸಮಯದಲ್ಲಿ ತೀರ್ಮಾನ ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತಾರೆ. ಇದಕ್ಕೆ ಅರ್ಥ ಏನು ? ಮತ್ತು ಇನ್ನೊಂದು ಪ್ರಶ್ನೆಯನ್ನು ಹಾಕಿ ತಾವು ಏನೊಂದು ಪಾಲಿಸಿಯನ್ನು ಡಿಕ್ಲೇರ್ ಮಾಡಿದ್ದೀರಿ, ಅದರಲ್ಲಿ ಬದಲಾವಣೆ ಇದೆಯೇ ಏನನ್ನುವುದನ್ನು ಕೇಳಿದ್ದೇನೆ. ಆವಕ್ಕೂ ಉತ್ತರ ಇಲ್ಲ. ತಮಗೆ ತಿಳಿದ ಹಾಗೆ ಈ ಸಾರಾಯಿ ಅಂಗಡಿಗಳನ್ನು ನಡೆಸುವುದು ಹಾಗೂ ಮುಚ್ಚುವುದರ ವಿಷಯವಾಗಿ ಬಹಳ ಪ್ರಮುಖವಾದ ಒಂದು ಪಾಲಿಸಿಯಾಗಿದೆ. ಈ ಪಾಲಿಸಿಗಾಗಿ ಏನೇ ಹೇಳಬೇಕಾಗಿದ್ದರೂ ಬಹಳ ಖಚಿತವಾಗಿ ಹೇಳಬೇಕಾಗಿದೆ. ಜನತೆ ಕೂಡ ಅದನ್ನು ಖಚಿತವಾದ ನಿಮ್ಮ [illegible] ಏನನ್ನುವುದನ್ನು ನಿರೀಕ್ಷೆ ಮಾಡುತ್ತಾರೆ. ನಾವು ಕಾಗದ ಬರೆದಿರುವುದು ಈ ಸದನದಲ್ಲಿ